ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು): ಮಾನ್ಯ ಅಧ್ಯಕ್ಷರೆ, ದಿನಾಂಕ: 21.3.2005 ರಂದು 14ನೇ ಪಟ್ಟಿಯಲ್ಲಿ ಲಿಖಿತ ಮೂಲಕ ಉತ್ತರಿಸುವ 225 ಪ್ರಶ್ನೆಗಳ ಪೈಕಿ 188 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು: ಮಂಡಿಸಲಾಯಿತು.

3. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು

(ಅ) ವಿಷಯ: ವಿವಿಧ ಇಲಾಖೆಗಳಲ್ಲಿ ದಿನಗೂಲಿ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿರುವ ನೌಕರರನ್ನು ಖಾಯಂಗೊಳಿಸುವ ಕುರಿತು.

ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ): ಮಾನ್ಯ ಅಧ್ಯಕ್ಷರೆ, ಸದನದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಮತ್ತು ಹಣಕಾಸು ಮಂತ್ರಿಗಳು ಇದ್ದಿದ್ದರೆ ಬಹಳ ಅನುಕೂಲವಾಗುತ್ತಿತ್ತು. ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರಾದರೂ ಇರಬೇಕಾಗಿತ್ತು. ಸರ್ಕಾರದ ವಿವಿಧ ಇಲಾಖೆಗಳಲ್ಲಿ ದಿನಗೂಲಿ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿರುವ ಸುಮಾರು 17 ಸಾವಿರಕ್ಕೂ ಮೇಲ್ಪಟ್ಟು ನೌಕರರಿದ್ದಾರೆ. ಕಳೆದ 10–15 ವರ್ಷಗಳಿಂದ ಅವರು ಸೇವೆಯಲ್ಲಿದ್ದಾರೆ. ಈ ಹಿಂದೆ ಸರ್ವೋಚ್ಚ ನ್ಯಾಯಾಲಯದ ಆಜ್ಞೆ ಪ್ರಕಾರ ಒಂದು ಮಿತಿಯೊಳಗೆ, ಅಂದರೆ 1976ರಕ್ಕೂ ಹಿಂದೆ ದಿನಗೂಲಿ ಆಧರದ ಮೇಲೆ ನೇಮಕಗೊಂಡು ಕಾರ್ಯ ನಿರ್ವಹಿಸುತ್ತಿದ್ದ ನೌಕರರನ್ನು ಖಾಯಂಗೊಳಿಸಲಾಯಿತು. ಆದರೆ 1976ರ ನಂತರ ನೇಮಕಗೊಂಡವರನ್ನು ಖಾಯಂಗೊಳಿಸಲಿಲ್ಲ. ಈ ಸಂಬಂಧ ಮತ್ತೆ ಸರ್ವೋಚ್ಚ ನ್ಯಾಯಾಲಯಕ್ಕೆ ಹೋಗುವಂತಾದ್ದು, ಕಾನೂನನ್ನು ಚಾಲೆಂಜ್ ಮಾಡುವಂತಾದ್ದು ನಡೆಯುತ್ತಿದೆ. ಈ ದಿನಗೂಲಿ ನೌಕರರಿಗೆ ಸೇವಾ ಭದ್ರತೆಯಿಲ್ಲ, ಅವರಿಗೆ ಯಾವುದೇ ವೇತನವಿಲ್ಲ, ಮುಂಬಡ್ತಿ ಇಲ್ಲ. ಹೀಗಾಗಿ, ಅಭದ್ರತೆಯಿಂದ ಅವರು ಇವತ್ತು ಜೀವನ ನಡೆಸಬೇಕಾದ ಪರಿಸ್ಥಿತಿ ಇದೆ. ಲೋಕೋಪಯೋಗಿ, ತೋಟಗಾರಿಕೆ ಹಾಗೂ ಬೇರೆ ಬೇರೆ ಇಲಾಖೆಗಳಲ್ಲಿ ಅದರಲ್ಲೂ ಪ್ರಮುಖವಾಗಿ ಕೆಳವರ್ಗದವರು, ದೀನ–ದಲಿತರು ದಿನಗೂಲಿ ನೌಕರರಾಗಿ ಕೆಲಸ ಮಾಡುತ್ತಿದ್ದಾರೆ. ಅವರುಗಳಿಗೆ ಸೇವಾ ಭದ್ರತೆ ಒದಗಿಸಿಕೊಡುವ ದೃಷ್ಟಿಯಿಂದ ಸರ್ಕಾರವೇ ಮನಸ್ಸು ಮಾಡಬೇಕು. ಸರ್ಕಾರ ಈ ಬಗ್ಗೆ ಸಚಿವ ಸಂಪುಟ ಉಪ ಸಮಿತಿ ರಚಿಸಿರುವ ಬಗ್ಗೆಯೂ ಈ ಸದನದಲ್ಲಿ ಅನೇಕ ಸಲ ಪ್ರಸ್ತಾಪವಾಗಿ ಚರ್ಚೆಯಾಗಿದೆ. ಆದರೂ ಸರ್ಕಾರ ಇದರ ಬಗ್ಗೆ ಮನಸ್ಸು ಮಾಡುತ್ತಿಲ್ಲ. ಈ ಬಗ್ಗೆ ಸರ್ಕಾರ ಒಂದು bold decision ತೆಗೆದುಕೊಂಡು, ಈ 17 ಸಾವಿರ ದಿನಗೂಲಿ ನೌಕರರನ್ನು ಒಂದೇ ಸಲ ಖಾಯಂಗೊಳಿಸಬೇಕೆಂದೇನೂ ಇಲ್ಲ, ಅವರನ್ನು ಹಂತ ಹಂತವಾಗಿ ಖಾಯಂಗೊಳಿಸಬೇಕು. ಸರ್ವೋಚ್ಚ ನ್ಯಾಯಾಲಯದಲ್ಲಿ ಪ್ರಕರಣ ಬಾಕಿ ಇದೆಯೆಂಬ ನೆಪವೊಡ್ಡಿ ಇದನ್ನು ಮುಂದಕ್ಕೆ ಹಾಕುವುದು ಬೇಡ. ಮಾನವೀಯ ದೃಷ್ಟಿಯಿಂದಲಾದರೂ ದಯವಿಟ್ಟು ಅವರನ್ನು ಖಾಯಂಗೊಳಿಸಬೇಕೆಂದು ನಾನು ವಿನಂತಿಸಿಕೊಳ್ಳುತ್ತಿದ್ದೇನೆ. ಇವೊತ್ತು ಪ್ರೊ: ಕೆ. ಶರ್ಮಾರವರು

ದೊಡ್ಡ ಪ್ರಮಾಣದಲ್ಲಿ ಪ್ರತಿಭಟನೆ, ಮೆರವಣಿಗೆಯ ಕಾರ್ಯಕ್ರಮವನ್ನು ಬೆಂಗಳೂರಿನಲ್ಲಿ ಹಮ್ಮಿಕೊಂಡಿದ್ದಾರೆ. ಆ ಮೂಲಕ ಸರ್ಕಾರದ ಮೇಲೆ ಒತ್ತಡ ತರುವ ಪ್ರಯತ್ನವನ್ನು ಅವರೂ ಮಾಡುತ್ತಿದ್ದಾರೆ. ಇಡೀ ರಾಜ್ಯದಿಂದ ದಿನಗೂಲಿ ನೌಕರರು, ಅಂಗನವಾಡಿ ಕಾರ್ಯಕರ್ತರೆಲ್ಲರೂ ಇವೊತ್ತು ಬೆಂಗಳೂರಿಗೆ ಬಂದಿರುವುದರಿಂದ ದಯವಿಟ್ಟು ಅವರ ಬೇಡಿಕೆಗಳಿಗೆ ಸ್ಪಂದಿಸುವ ಕೆಲಸವನ್ನು ಸರ್ಕಾರ ಮಾಡಬೇಕೆಂದು ವಿನಂತಿಸಿಕೊಳ್ಳುತ್ತಿದ್ದೇನೆ.

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು): ಸನ್ಮಾನ್ಯ ಅಧ್ಯಕ್ಷರೇ, ಬಹಳ ಪ್ರಮುಖವಾದ ವಿಷಯವನ್ನು ಸನ್ಮಾನ್ಯ ಜಗದೀಶ್ ಶೆಟ್ಟರ್‌ರವರು ಪ್ರಸ್ತಾಪಿಸಿದ್ದಾರೆ. ಆದರೆ, ಈ ವಿಷಯದಲ್ಲಿ ಸರ್ಕಾರದ ಇತಿಮಿತಿಗಳನ್ನೂ ಕೂಡ ತಾವು ಗಮನಿಸಬೇಕು. ದಿನಗೂಲಿ ನೌಕರರ ಮೇಲೆ ನಮಗೆ ಮಾನವೀಯ ಅನುಕಂಪ ಇಲ್ಲವೆಂಬ ಪ್ರಶ್ನೆಯಲ್ಲ, ಪ್ರಶ್ನೆ ಇರತಕ್ಕಂಥಾದ್ದು, ಸಕಾರದಲ್ಲಿನ ಸಂಪನ್ಮೂಲಗಳ ಕೊರತೆ ಮತ್ತು ಸರ್ಕಾರದ ಬೊಕ್ಕಸಕ್ಕೆ ಬರುವ ಬಹಳಷ್ಟು ಆದಾಯದಲ್ಲಿ ಇಂತಹ ಸಂಬಳ-ಸಾರಿಗೆ, ಪಿಂಚಣಿ ಮೊದಲಾದುವುದಕ್ಕೆ ಖರ್ಚು ಮಾಡಬೇಕಿರುತ್ತದೆ. ಈಗಾಗಲೇ ಶೇಕಡ 60 ಕ್ಕಿಂತಲೂ ಹೆಚ್ಚು ಪ್ರಮಾಣದ ಹಣವನ್ನು ನಾವು ಈ ರೀತಿಯಾದ ವ್ಯವಸ್ಥೆ ಕಡೆಗೆ ಕೊಡುತ್ತಿದ್ದೇವೆ. ಈ ಪ್ರಶ್ನೆ ಕೇವಲ 17 ಸಾವಿರ ದಿನಗೂಲಿ ನೌಕರರಿಗಷ್ಟೇ ಸೀಮಿತವಾಗುವುದಿಲ್ಲ. ಸಹಕಾರ ಸಂಘಗಳಲ್ಲಿ ಕೆಲಸ ಮಾಡುತ್ತಿರುವ ಸುಮಾರು 28 ಸಾವಿರದಷ್ಟು ದಿನಗೂಲಿ ನೌಕರರು ಬೇಡಿಕೆ ಇಟ್ಟಿದ್ದಾರೆ. ಅದೇ ರೀತಿ ಬೇರೆ ಬೇರೆ ಇಲಾಖೆಗಳಲ್ಲಿ ಮುಜರಾಯಿ ಇಲಾಖೆಯಲ್ಲಿ, ದೇವಸ್ಥಾನಗಳಲ್ಲಿ ಕೆಲಸ ಮಾಡತಕ್ಕವರೂ ಕೂಡ ಇಂತಹ ಬೇಡಿಕೆಯನ್ನು ಇಟ್ಟಿದ್ದಾರೆ. ಇದು ಒಂದು ಬಾರಿ ಇತ್ಯರ್ಥ ಸುಪ್ರಿಂ ಕೋರ್ಟ್‌ನಲ್ಲಿ ಆಗಬೇಕೆಂಬ ಕಾರಣ ಇದ್ದುದರಿಂದ 1984ರ ಆಚೆ ಇರತಕ್ಕವರನ್ನೆಲ್ಲಾ ನಾವು ಈಗಾಗಲೇ ಖಾಯಂಗೊಳಿಸಿರತಕ್ಕದ್ದು, ಸೂಪರ್‌ನ್ಯೂಮರರಿ ಹೆಚ್ಚುವರಿ ಹುದ್ದೆಗಳೆಂದು ಪರಿಗಣಿಸಿ ಎಲ್ಲೆಲ್ಲಿ ಸಾಧ್ಯವೋ ಅಲ್ಲೆಲ್ಲಾ ಅವರನ್ನೆಲ್ಲಾ ಇಲಾಖೆಗಳಲ್ಲಿ ವಿಲೀನಗೊಳಿಸಕೊಂಡಿದ್ದೇವೆ. ಆದರೆ, ಸುಪ್ರಿಂ ಕೋರ್ಟ್‌ನಲ್ಲಿ ಈ ವಿಚಾರ, ವಿವಾದ ಇರತಕ್ಕ ಹಿನ್ನೆಲೆಯಲ್ಲಿ ನಾವು ತಕ್ಷಣವೇ ನಿಯಮಾವಳಿಗಳನ್ನು ರಚನೆ ಮಾಡುವುದಾಗಲೀ, ಅದಕ್ಕೆ ಸ್ಪಂದಿಸತಕ್ಕದ್ದು ಬಹಳ ಕಷ್ಟದ ಕೆಲಸ. ತಾವು ಈ ಭಾಗದಲ್ಲಿದ್ದರೂ ಕೂಡ ಅದೇ ಜವಾಬ್ದಾರಿಯಾಗುತ್ತಿತ್ತು. ಈ ಕಾರಣಕ್ಕಾಗಿ ನಮಗೆ ದಿನಗೂಲಿಗಳ ಅಭದ್ರತೆಯ ಬಗ್ಗೆ ಅವರ ಜೀವನದ ನಿರ್ವಾಹಣೆಯ ಬಗ್ಗೆ ಎಷ್ಟೇ ಅನುಕಂಪ ಇದ್ದರೂ ಅದನ್ನು ನಾವು ಜಾರಿಮಾಡಿಕೊಳ್ಳಲು ಸಾಧ್ಯವಾಗಲಾರದಂಥ ಸಂಪನ್ಮೂಲಗಳ ಕಷ್ಟದ ಸ್ಥಿತಿಯಲ್ಲಿದ್ದೇವೆ. ಇದು ಒಂದು, ಎರಡನೆಯದಾಗಿ, ತಾವು ಅಂಗನವಾಡಿಯವರ ವಿಚಾರದಲ್ಲೂ ಕೂಡ ಪ್ರಸ್ತಾಪ ಮಾಡಿದ್ದೀರಿ. ಅಂಗನವಾಡಿ ಕಾರ್ಯಕ್ರಮವೆಂಬುದು ಕೇಂದ್ರ ಸರ್ಕಾರ ಕಾಲಕಾಲಕ್ಕೆ ಜಾರಿಗೊಳಿಸಿರತಕ್ಕಂಥ ಒಂದು ಯೋಜನೆ. ಆ ಯೋಜನೆ ಯಾವಾಗ ನಿರ್ಧಾರವಾಗುತ್ತದೋ ನಮಗೆ ಗೊತ್ತಿಲ್ಲ. ಅವರ ಬಗ್ಗೆ ನಮಗೆ ಬಹಳ ಸಹಾನುಭೂತಿ ಇದ್ದದ್ದರಿಂದ ರಾಜ್ಯ ಸರ್ಕಾರ ಅವರಿಗೆ ಕಾಲಕಾಲಕ್ಕೆ ಹೆಚ್ಚಿನ ವೇತನವನ್ನು ಕೊಡುತ್ತಾ ಬಂದಿದ್ದೇವೆ. ಆದರೂ ಅವರನ್ನು

ಖಾಯಂ ಗೊಳಿಸಬೇಕೆಂದರೆ, ಆ ಯೋಜನೆ ತಾತ್ಕಾಲಿಕವಾಗಿರತಕ್ಕಂಥ ಯೋಜನೆ ಯಾಗಿರಬಹುದು. ಆದರೆ ನಿಖರವಾದಂಥ ಯೋಜನೆಯಾಗಿದ್ದರೆ ಸರ್ಕಾರದ ನೌಕರರನ್ನಾಗಿ ಪರಿಗಣಿಸುವಂಥದ್ದು ಇತ್ತು. ಆದರೆ ಇಂಥ ಕಷ್ಟಗಳ ಸ್ಥಿತಿ ಇರುವುದರಿಂದ ಸುಪ್ರೀಂ ಕೋರ್ಟ್‌ನವರೇನು ನಿರ್ಣಯ ಮಾಡುತ್ತಾರೆ, ಆ ತೀರ್ಮಾನಕ್ಕಾಗಿ ನಾವು ಕಾಯುತ್ತಿದ್ದೇವೆ. ಅದು ಬಂದ ನಂತರ ನಾವು ಖಂಡಿತವಾಗಿ ಸಹಾನುಭೂತಿಯಿಂದ ಇದನ್ನು ಪರಿಶೀಲಿಸಿ ಕ್ರಮ ಕೈಗೊಳ್ಳುತ್ತೇವೆ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ: ಮಾನ್ಯ ಅಧ್ಯಕ್ಷರೆ, ಮೈಸೂರು ಮಹಾ ನಗರ ಪಾಲಿಕೆಯಲ್ಲಿ.....

ಅಧ್ಯಕ್ಷರು: ದಯಮಾಡಿ ಕುಳಿತುಕೊಳ್ಳಿ ಅದಕ್ಕೆಲ್ಲಾ ಶೂನ್ಯ ವೇಳೆಯಲ್ಲಿ ಅವಕಾಶವಿಲ್ಲ. ತಾವು ದಯಮಾಡಿ ಬೇರೆ ಕಳಿಸಿ.

(ಆ) ವಿಷಯ: ಬೆಂಗಳೂರು ನಗರದಲ್ಲಿ ಸೈಟುಗಳನ್ನು ಕೊಡತ್ತೇವೆಂದು ಮುಗ್ಧ ಜನರನ್ನು ವಂಚನೆ ಮಾಡಿರುವ ಕಂಪನಿಗಳ ಬಗ್ಗೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ): ಸನ್ಮಾನ್ಯ ಅಧ್ಯಕ್ಷರೇ, ಬೆಂಗಳೂರು ನಗರದಲ್ಲಿ ಜನರನ್ನು ವಂಚನೆ ಮಾಡತಕ್ಕ ಕಂಪನಿಗಳು ಚಿಟ್ ಫಂಡ್ ಕಂಪನಿ, ಅದು ಇದು ಎಂದು ಮೊದಲೆಲ್ಲಾ ಇದ್ದವು. ಆದರೆ ಈಗ ಸೈಟುಗಳನ್ನು ಕೊಡುತ್ತೇವೆಂದು ಹೇಳಿ ಮುಗ್ಧ ಜನರನ್ನು ವಂಚನೆ ಮಾಡತಕ್ಕ ಕಂಪನಿಗಳು ಹುಟ್ಟಿಕೊಂಡು ಸಾವಿರಾರು ಜನ ಮುಗ್ದರನ್ನು ಸುಲಿಗೆ ಮಾಡತಕ್ಕ ರೀತಿಯಲ್ಲಿ ನೂರಾರು ಕೋಟಿ ರೂಪಾಯಿಗಳ ವಂಚನೆಯಾಗಿದೆ. ಈ ವಂಚನೆಯಿಂದಾಗಿ ಬೆಂಗಳೂರು ನಗರದಲ್ಲಿ ಒಂದು ರೀತಿ ಮಾಫಿಯಾ ಗ್ಯಾಂಗ್‌ನ ನಿರ್ಮಾಣವಾಗಿ ಯಾರಾದರೂ ಅದರ ಬಗ್ಗೆ ಪ್ರತಿಭಟನೆ ಮಾಡಿದರೆ ಕೊಲೆ ಮಾಡತಕ್ಕ ಸ್ಥಿತಿ ನಿರ್ಮಾಣವಾಗಿದೆ. ಶಿವಜ್ಯೋತಿ, ಆದಿತ್ಯ, ಅಮೃತ ಎಂಬ ಮೂರು ಡೆವಲಪ್ಪರ್ಸ್ ಕಂಪನಿಗಳು ಬೆಂಗಳೂರು ನಗರದಲ್ಲಿ ಪರಿಷ್ಟಿತ ಬಡಾವಣೆಗಳಲ್ಲಿ ಸೈಟುಗಳನ್ನು ಕೊಡುತ್ತೇವೆಂದು ಹೇಳಿ ಒಂದೊಂದು ಸೈಟಿಗೆ ಎರಡು ಲಕ್ಷದ ಪ್ರಕಾರ ಆರು ಸಾವಿರ ಜನರ ಹತ್ತಿರ ಸುಮಾರು ಒಂದುನೂರು ಕೋಟಿ ರೂಪಾಯಿಗಳನ್ನು ವಸೂಲಿ ಮಾಡಿದ್ದಾರೆ. ಬಿ.ಎಂ. ಆರ್.ಡಿ. ವತಿಯಿಂದ ಪ್ರಮಾಣ ಪತ್ರವನ್ನೂ ಕೊಟ್ಟಿದ್ದಾರೆಂದು ಡೂಪ್ಲಿಕೇಟ್‌ನ್ನು ತಂದು ಅದನ್ನು ತೋರಿಸಿ ಒಂದು ದಿನಪತ್ರಿಕೆಯಲ್ಲಿ ಪ್ರಕಟಣೆಯನ್ನು ಕೊಟ್ಟು ಜನ ವಂಚಿತರಾಗಿ ನೂರುಕೋಟಿ ರೂಪಾಯಿಗಳಿಗಿಂತ ಹೆಚ್ಚು ಹಣವನ್ನು ಕಳೆದುಕೊಂಡಿತಕ್ಕಂಥಾದ್ದು, ಮತ್ತು ಅವರು ಕೇಳಲು ಹೋದಂಥ ಸಂದರ್ಭದಲ್ಲಿ ಗೂಂಡಾಗಳನ್ನು ಕಳಿಸಿ ಅವರ ಪ್ರಾಣವನ್ನು ತೆಗೆಯತಕ್ಕ ಕೈಕಾಲು ಮುರಿಯತಕ್ಕ ಬೆದರಿಕೆಯನ್ನು ಹಾಕಿದ್ದಾರೆ. ಹೀಗೆ ವಂಚನೆಗೆ ಒಳಗಾಗಿರುವವರಲ್ಲಿ ಹಲವಾರು ಜನ ಅಧಿಕಾರಿಗಳು ಇದ್ದಾರೆ, ಪತ್ರಕರ್ತರಿದ್ದಾರೆ, ವಕೀಲರು ಇದ್ದಾರೆ, ಮತ್ತು ಎಲ್ಲಾ ವಿಭಾಗದ ಜನರು ಕೂಡ ಇದ್ದಾರೆ, ಬೆಂಗಳೂರು ನಗರದಲ್ಲಿ ಯಾವುದೋ ಒಂದು ಕಾರಣಕ್ಕಾಗಿ ಇಂಥ ಘಟನೆಗಳು ಪ್ರತಿನಿತ್ಯ ನಡೆಯುತ್ತಿವೆ. ಇವತ್ತು